**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 6296 /2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ನಾಗರಾಜು | **ಚಾ.ಸಾ.-10** |
| **ತಂದೆಯ ಹೆಸರು** | - | ಶಿವಲಿಂಗಯ್ಯ | **ಫ್ರಾ.ಸಾ.-10** |
| **ವಯಸ್ಸು** | - | 55 ವರ್ಷ | |
| **ಉದ್ಯೋಗ** | - | ವ್ಯವಸಾಯ | |
| **ವಾಸಸ್ಥಳಃ** | - | ನಗರಕೆರೆ | |

ದಿನಾಂಕಃ 07.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರೀ ದಾಖಲೆ ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿ.ಪಿ. 7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 7 ಸಿ ಎಂದು ಗುರುತಿಸಲಾಯಿತು. ಸದರೀ ದಾಖಲೆಗೆ 2021 ನೇ ಇಸವಿಯಲ್ಲಿ ಸಂಜೆ 04.00 ರಿಂದ 05.00 ಗಂಟೆಯ ಸಮಯದಲ್ಲಿ ರಸ್ತೆಯ ವಿಚಾರವಾಗಿ ಗಲಾಟೆಯಾದ ಸ್ಥಳದಲ್ಲಿ ಪೋಲೀಸರು ಬರವಣಿಗೆಯನ್ನು ಮಾಡಿಕೊಂಡಿರುತ್ತಾರೆ, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸದರೀ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನನ್ನ ಸಮಕ್ಷಮ ನಿ.ಪಿ. 7 ದಾಖಲೆಗೆ ನನ್ನನ್ನು ಹೊರತುಪಡಿಸಿ ಚಾ,ಸಾ. 9 ರವರು ಸಹಿ ಮಾಡಿರುತ್ತಾರೆ.

**( ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ದಿನಾಂಕಃ 16.01.2021 ರಂದು ನಗರಕೆರೆ ಗ್ರಾಮದ ಹಳೇ ಸ್ಕೂಲಿನ ಪಶ್ಚಿಮ ದಿಕ್ಕಿನ ರಸ್ತೆಯಲ್ಲಿ ಚಾ.ಸಾ. 3 ರವರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಸಂಜೆ 05.15 ರಿಂದ, 06.00 ಗಂಟೆಯವರೆಗೆ ನಿ.ಪಿ. 7 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರುಃ ಶ್ರೀ ಎಂ ಕೆ ಜೆ ರವರಿಂದ.**

ಪೋಲೀಸರು ಬಂದ ಸಂದರ್ಭದಲ್ಲಿ ನಾನು ಊರಿನಲ್ಲಿದ್ದೆ. ನಮ್ಮ ಮನೆಯಿಂದ ಘಟನಾ ಸ್ಥಳಕ್ಕೆ ಸುಮಾರು 300 ಅಡಿ ದೂರ ಇದೆ. ಪೋಲೀಸರು ಬಂದ ಸಂದರ್ಭದಲ್ಲಿ ನಾನು ಅಂಗಡಿಯ ಬಳಿ ಇದ್ದೆ. ಆ ಸಮಯದಲ್ಲಿ ಸದರೀ ಅಂಗಡಿಯ ಬಳಿ ಸುಮಾರು ಜನ ಇದ್ದರು. ಮಹಜರ್ ನ ಸಂದರ್ಭದಲ್ಲಿ ಪಂಚಾಯತಿ ಕಾರ್ಯದರ್ಶಿ ಮತ್ತು ಪಿ ಡಿ ಓ ರವರೂ ಕೂಡ ಇದ್ದರು. ನಾನು ಗಲಾಟೆಯನ್ನು ನೋಡಿದ್ದೇನೆಂಬ ವಿಚಾರವನ್ನು ಪೋಲೀಸರಿಗೆ ತಿಳಿಸಿರುತ್ತೇನೆ. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

ಸದರೀ ರಸ್ತೆ ಎಷ್ಟು ಅಡಿ ಅಗಲ ಇದೆ ಮತ್ತು ಎಷ್ಟು ಅಡಿ ಉದ್ದ ಇದೆಯೆಂಬುದರ ಬಗ್ಗೆ ಯಾವುದೇ ದಾಖಲೆ ಇಲ್ಲ. ಸದರೀ ರಸ್ತೆ ಆರೋಪಿ 1 ರವರಿಗೆ ಸೇರಿದ ಜಾಗ ಎಂದರೆ ಸರಿಯಲ್ಲ. ನಂತರ ಸಾಕ್ಷಿ ಮುಂದುವರೆದು, ಸದರೀ ಜಾಗ ಗ್ರಾಮಠಾಣಾ ಸೇರಿದ ಜಾಗ ಎಂದು ನುಡಿಯುತ್ತಾರೆ. ಸದರೀ ಸ್ಥಳದಲ್ಲಿ ಗ್ರಾಮ ಠಾಣಾ ಆಸ್ತಿ ಎಷ್ಟು ಇದೆಯೆಂದು ನನಗೆ ಗೊತ್ತಿಲ್ಲ. ನಗರಕೆರೆ ಗ್ರಾಮದಲ್ಲಿ ಎಷ್ಟು ರಸ್ತೆಗಳಿವೆ, ಸದರೀ ರಸ್ತೆಗಳು ಎಷ್ಟು ಉದ್ದ ಮತ್ತು ಅಗಲ ಇವೆಯೆಂಬುದರ ಬಗ್ಗೆ ನಾನು ದಾಖಲೆಗಳನ್ನು ನೋಡಿಲ್ಲ. ನಿಮ್ಮ ಊರಿನಲ್ಲಿ ರಾಜಕೀಯವಾಗಿ ಎರಡು ಗುಂಪುಗಳಿವೆಯೆಂದರೆ ಸರಿಯಲ್ಲ. ನಿಮ್ಮ ಊರಿನಲ್ಲಿ ಹಬ್ಬ ಹರಿದಿನಗಳು ನಡೆದ ಸಂದರ್ಭದಲ್ಲಿ ಗಲಾಟೆಗಳಾಗುತ್ತವೆಯೆಂದು ಬಂದೋ ಬಸ್ತಿಗಾಗಿ, ಪೋಲೀಸರನ್ನು ನಿಯೋಜನೆ ಮಾಡುತ್ತಾರೆಂದರೆ ಸರಿ. ರಾಜಕೀಯವಾಗಿ, ನೀವು ಮತ್ತು ಆರೋಪಿತರು ಬೇರೆ ಬೇರೆ ಪಕ್ಷಕ್ಕೆ ಸೇರಿದವರು ಎಂದರೆ ಸರಿಯಲ್ಲ. ನೀವು ಆರೋಪಿತರ ವಿರುದ್ಧ ಇರುವ ಗುಂಪಿನ ಮುಖ್ಯ ವ್ಯಕ್ತಿ ಎಂದರೆ ಸರಿಯಲ್ಲ. ಸಣ್ಣ ಸಣ್ಣ ವಿಚಾರಕ್ಕೆ ಎರಡು ಗುಂಪುಗಳ ಮಧ್ಯೆ ನೀವು ಕಲಹವನ್ನುಂಟುಮಾಡುತ್ತೀರಿ ಎಂದರೆ ಸರಿಯಲ್ಲ. ರಸ್ತೆಯ ವಿಚಾರವಾಗಿ ಯಾವುದೇ ಗಲಾಟೆ ನಡೆದಿರುವುದಿಲ್ಲ ಮತ್ತು ಪೋಲೀಸರೂ ಕೂಡ ಸ್ಥಳಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಆರೋಪಿತರ ವಿರುದ್ಧವಿರುವ ರಾಜಕೀಯ ಪಕ್ಷದ ಮುಖಂಡರಾಗಿರುವ ಕಾರಣ ಪೋಲೀಸರು ಠಾಣೆಯಲ್ಲಿ ಮಹಜರ್ ನ್ನು ಸೃಷ್ಟಿ

ಮಾಡಿ, ಅದಕ್ಕೆ ನಿಮ್ಮ ಸಹಿಯನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ಮಹಜರ್ ನ ಸಂದರ್ಭದಲ್ಲಿ ಚಾ.ಸಾ. 9 ರವರೂ ಕೂಡ ಇದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೋಲೀಸರು ಘಟನಾ ಸ್ಥಳಕ್ಕೆ ಬಂದಿಲ್ಲ ಮತ್ತು ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.